"ಇಕಾ, ನೀನು ಬಂದೆ ಅಂದ್ರೆ ಇವನ ಜವಾಬ್ದಾರಿ ನಿನ್ನ ತಲೇ ಮೇಲೆ. ಹೊತ್ತು ಹೋಗೋದೇ ಗೊತ್ತಾಗಲ್ಲ ನಿಂಗೆ..." ಹೊರಲಿಲ್ಲ, ಹೇರಲಿಲ್ಲ, ಆದರೂ ಮೊಗೆಮೊಗೆದು ಎನ್ನುವಂತೆ ಪ್ರೀತಿ ಸುರಿಯುತ್ತಿದ್ದಾರೆ ತಮ್ಮನ ಮಕ್ಕಳು. ಪ್ರೀತಿಪಾತ್ರರ ಜೊತೆಯಲ್ಲಿ ಸುಖವಾಗಿರಬಹುದಾದ ಆಮಿಷ ತಳ್ಳಿಹಾಕುವಂತದೇನಲ್ಲ.

"ಆಯ್ತು, ನೀನು ಇಷ್ಟೊಂದು ಬಲವಂತ ಮಾಡ್ತಿದ್ದಿ ಅಂದಮೇಲೆ ನನ್ನ ಕೊನೆಗಾಲ ನಿಮ್ಮ ಜೊತೆಗೇ..." ಎಲ್ಲರ ಮುಖಗಳೂ ಅರಳಿದ್ದನ್ನು ಗಮನಿಸಿ ರಾಧಮ್ಮನ ಜೀವಕ್ಕೆ ಬಲು ಹಿತವಾಗಿತ್ತು. ಹೇಳಿದ್ದ ಮಾಧವ, "ಕೊನೆಗಾಲದ ಮಾತು ಆಡ್ಲೇಬೇಡ ನೀನು. ಅಷ್ಟು ಸಲೀಸಾಗಿ ನಿನ್ನ ಸಾಯೋಕೆ ಬಿಡಲ್ಲ. ರಾಧತ್ತೇ, ನೀನು ಎಷ್ಟೆಲ್ಲಾ ಕಷ್ಟಪಟ್ಟಿದ್ದಿ ಅಂತ ನೆನೆಸ್ಕೊಂಡ್ರೆ ಸಂಕಟ ಆಗುತ್ತೆ. ಇನ್ನಾದ್ರೂ ನೀನು ಸುಖವಾಗಿರು ಅಂತ."

ಎಲ್ಲರ ಮುಖದಲ್ಲೂ ಒಂದು ವಿಷಾದಭಾವ. ಸಂಸಾರಸುಖ ಅಂದರೇನೆಂಬುದನ್ನು ಅನುಭವಿಸಲೇ ಇಲ್ಲ ರಾಧತ್ತೆ. ಸನ್ಯಾಸಿನಿಯಂತೆ ಬದುಕು ಸವೆಸಿಬಿಟ್ಟಳು. ಕೈ ಹಿಡಿದವನಾದರೂ ಸುಖ ಉಂಡಿದ್ದು ಅಷ್ಟರಲ್ಲೇ ಇತ್ತು. ಆಡಬಾರದ ಆಟ ಆಡಿದ. ಸಾಯಬಾರದ ವಯಸ್ಸಿನಲ್ಲಿ ಸತ್ತ. ಹೆಂಡತಿ ಧಿಕ್ಕರಿಸಿ ಬಂದ ಮೇಲೆ ಅವನು ಬದುಕಿದ್ದು ಕೆಲವೇ ವರ್ಷ. ಸಹಜ ಸಾವಲ್ಲ. ದುರ್ಮರಣ. ಯಾರೋ ತಲೆ ಒಡೆದು ಹಾಕಿ ಸೇಡು ತೀರಿಸಿಕೊಂಡಿದ್ದರು. ಬೇರೆಯವರ ತಟ್ಟೆಗೆ ಕೈ ಹಾಕಲು ಹೋದರೆ ಯಾರು ಎಷ್ಟು ಕಾಲ ಸೈಸಿಕೊಂಡಿರುತ್ತಾರೆ? ಹೆಣ್ಣು, ಮಣ್ಣುಗಳ ವಿಪರೀತದ ವ್ಯಾಮೋಹ ಸುಖಾಂತ್ಯಕ್ಕಿಂತಾ ತದ್ವಿರುದ್ಧವಾಗುವುದೇ ಹೆಚ್ಚು ಅನ್ನುವುದು ಲೋಕ ಬಲ್ಲ ಸತ್ಯ. ಈ ಮನೆಗೆ ಅವರು ವಿಷಯ ತಿಳಿಸಿರಲಿಲ್ಲ. ತಿಳಿಸಿದ್ದರೂ ಯಾರೂ ಹೋಗುತ್ತಿರಲಿಲ್ಲ. ಕಡಿದ ಕೊಂಡಿ ಬೆಸುಗೆಯಾಗದೆ ಸದಾಕಾಲಕ್ಕೂ ಕಡಿದು ಹೋಗಿತ್ತು, ಇನ್ಯಾವತ್ತೂ ಆ ಪ್ರಸ್ತಾಪ ಕೂಡಾ ಬರದಂತೆ.

ಅಂತೂ ರಾಧಮ್ಮ ನಿವೃತ್ತಿಯ ನಂತರ ತೌರೂರಿಗೆ ಬಂದಿರುವುದು ಪಕ್ಕಾ ಆಯ್ತು. ಬಂದಿದ್ದೂ ಆಯ್ತು. ಅಲ್ಲಿನ ಮನೆಯ ಸಾಮಾನು ಸರಂಜಾಮುಗಳ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾನೆ ಕೇಶವ. ಮುಂದೆ ಮನೆಯನ್ನು ಬಾಡಿಗೆಗೆ ಕೊಡುವವರೆಗೆ ಅವನದೇ ಮೇಲ್ವಿಚಾರಣೆ. ರಾಧಮ್ಮ ಗಂಟು ಕಟ್ಟಿ ತಂದದ್ದೆಲ್ಲಾ ಅವರ ಇನ್ನೊಂದು ಜೀವದಂತಿದ್ದ ಪುಸ್ತಕಗಳ ಹೊರೆ. ಜೊತೆಗೆ ಅಗತ್ಯ ಬಟ್ಟೆಬರೆ.

★★★

ಇಷ್ಟು ಬೇಗ ಯಮದೂತರು ತನಗಾಗಿ ಹೊಂಚು ಹಾಕುತ್ತಿದ್ದಾರೆಂದು ಸ್ವತಹಾ ರಾಧಮ್ಮ ಕೂಡಾ ಯೋಚಿಸಿರಲಿಕ್ಕಿಲ್ಲ. ಬೆಂಗಳೂರಿನಲ್ಲಿ ಗಂಟುಮೂಟೆ ಕಟ್ಟುವಾಗಲೇ ದಿನಗಣನೆ ಶುರುವಾಗಿತ್ತೇ? ಇನ್ನೂ ನಿವೃತ್ತಿವೇತನದ ಲೆಕ್ಕಾಚಾರ ಆಗಿರಲಿಲ್ಲ. ಓದಿ ಮುಗಿಸಬೇಕೆಂದು ಕಟ್ಟಿಕೊಂಡು ತಂದ ಪುಸ್ತಕಗಳಲ್ಲಿ ಒಂದನ್ನೂ ಓದಿರಲಿಕ್ಕಿಲ್ಲ, ಬಹುಶಃ. ರಾಧಮ್ಮನಿಗೆ ಚೀಟಿ ಬಂದುಬಿಟ್ಟಿತು. ಮೊದಲಿಗೆ ಗಮನಿಸಿದ್ದು ಮಾಧವ. ಬೆಳಿಗ್ಗೆ ಗಂಟೆ ಎಂಟಾಗಿ, ಮನೆಯವರೆಲ್ಲರ ತಿಂಡಿ ಮುಗಿದರೂ ಅತ್ತೆ ಏಳದಿದ್ದಾಗ ಅವನಿಗೆ ಮನಸ್ಸು ತಡೆಯಲಿಲ್ಲ. ನಿಧಾನಕ್ಕೆ ರಾಧತ್ತೆಯ ಕೋಣೆಯ ಕದ ತಟ್ಟಿದ. ಅಗುಳಿ ಹಾಕಿಕೊಂಡು ಮಲಗುವ ಅಭ್ಯಾಸ ರಾಧಮ್ಮನಿಗಿಲ್ಲ. ಬಾಗಿಲು ಮುಂದೆ ಮಾಡಿಕೊಂಡರೆ ಸೈ. ಮಾಧವ ಕೈ ಇಡುತ್ತಿದ್ದಂತೆ ತೆರೆದುಕೊಂಡಿತು ಬಾಗಿಲು. ಕೋಣೆಯೊಳಗೆ ಲೈಟು ಉರಿಯುತ್ತಿದೆ. ಅಂಗಾತ ಮಲಗಿದ್ದಾಳೆ ರಾಧತ್ತೆ. ಅರೆತೆರೆದ ಪುಸ್ತಕ ಎದೆಯ ಮೇಲೆ ಬೋರಲಾಗಿದೆ. ಎಡಗೈ ಬೆರಳುಗಳು ಪುಸ್ತಕದ ಮೇಲಿವೆ. ಹಾಸಿಗೆಯ ಮೇಲೆ ಉದ್ದಕ್ಕೆ ಚಾಚಿಕೊಂಡಿದೆ ಬಲಗೈ. "ರಾಧತ್ತೇ..." ಕರೆದ ಮಾಧವ. ಹಂದಲಿಲ್ಲ ರಾಧತ್ತೆ. ಹತ್ತಿರ ಹೋಗಿ ನಿಂತು ಅವರ ಎದೆಯ ಮೇಲಿದ್ದ ಪುಸ್ತಕ ತೆಗೆದು ಕೆಳಗಿಡಲು ಅವರ ಕೈ ಸರಿಸಿದವನಿಗೆ ಅನುಮಾನ ಕಾಡಿತು. ಝುಗ್ಗೆಂದಿತು ಎದೆ.